ಅಂತ ಮನೆಯವರನ್ನು ಒಪ್ಪಿಸಿಯೇ ಭಾಸ್ಕರ ಮನೆಯವರೊಂದಿಗೆ ಊರಿಗೆ ಹೊರಟಿದ್ದು. ಮೇನಕಳ ಪಾಸ್‌ಪೋರ್ಟ್, ವೀಸಾ ಕೂಡಾ ಅಷ್ಟರಲ್ಲಿ ಮಾಡಿಸಲು ಸಿದ್ಧತೆ ಮಾಡಿಕೊಂಡರು.

ಮದುವೆ ಸರಳವಾಗಿ ನಡೆಯಬೇಕು ಎಂಬುದು ಭಾಸ್ಕರನ ಆಣತಿ. ಮನೆಯ ಮೊದಲ ಮದುವೆ ಅದ್ದೂರಿಯಿಂದ ಮಾಡಬೇಕು ಎಂಬುದು ಜಗದೀಶರ ಆಸೆ. ಸಮಯದ ಅಭಾವ ಇದ್ದ ಕಾರಣ ಮದುವೆಯನ್ನು ಮನೆಯ ಮುಂದೆ ಚಪ್ಪರ ಹಾಕಿ, ಸಮೀಪ ಬಂಧುಗಳನ್ನಷ್ಟೇ ಕರೆದು ಶಾಸ್ತ್ರೋಕ್ತವಾಗಿಯೇ ಮಾಡಿ ಮುಗಿಸಿದರು. ಮದುವೆಗೆ ಕರೆಯಲಿಲ್ಲ ಅಂತ ಆಕ್ಷೇಪಣೆ ಮಾಡಿದವರಿಗೆ ಅಳಿಯ ವಿದೇಶಕ್ಕೆ ಹೊರಟಿರುವುದರಿಂದ ಅವಸರವಾಗಿ ಮಾಡಬೇಕಾಯಿತು, ಇನ್ನೂ ಮನೆಯಲ್ಲಿ ಮದುವೆ ಕಾರ್ಯಗಳು ನಡೆಯಬೇಕಾಗಿದೆ, ಆಗ ಖಂಡಿತ ಕರೆಯುತ್ತೇವೆ ಅಂತ ಸಮಾಧಾನಿಸಿ ಭರವಸೆ ನೀಡುತ್ತಿದ್ದರು. ಯಾವ ಲೋಪವೂ ಆಗದೆ ಮದುವೆ ಸಾಂಗವಾಗಿ ನಡೆಯಿತು. ಮದುವೆ ಮುಗಿದ ಕೂಡಲೆ ಮೇನಕ ಮತ್ತು ತರುಣ್ ವಿದೇಶಕ್ಕೆ ಹೊರಡಬೇಕಾಯಿತು. ಒಳ್ಳೆಯ ಸಂಬಂಧ ಸಿಕ್ಕಿರುವ ಸಂತೋಷದಲ್ಲಿ ಮಗಳು ದೂರದಲ್ಲಿದ್ದರೂ ಸುಖವಾಗಿರುವಳು ಅನ್ನೋ ನೆಮ್ಮದಿಯಿಂದ ಜಗದೀಶ ಮತ್ತು ಶಾಂಭವಿ ಮಗಳ ಅಗಲಿಕೆಯ ನೋವು ಮರೆಯಲು ಪ್ರಯತ್ನಿಸುತ್ತಿದ್ದರು.

ಅಕ್ಕನ ಮದುವೆ ಓಡಾಟದಲ್ಲಿ ವೀರೂ ತಾನು ಅಂದುಕೊಂಡಿದ್ದನ್ನು ಮಾಡಲು ಆಗಲೇ ಇಲ್ಲ. ಅಕ್ಕಂದಿರೆಲ್ಲ ಬಣ್ಣ ಬಣ್ಣದ ಸೀರೆ ಧರಿಸಿ ಕೈತುಂಬಾ ಬಳೆ ಧರಿಸಿ, ಮುಡಿ ತುಂಬಾ ಹೂ ಮುಡಿದು ಉತ್ಸಾಹದ ಚಿಲುಮೆಗಳಾಗಿ ಓಡಾಡುತ್ತಿದ್ದನ್ನು ವೀರೂ ಗಮನಿಸುತ್ತಲೇ ಇದ್ದ. ತಾನೂ ಕೂಡಾ ಅವರಂತೆ ಸೀರೆ ಉಟ್ಟು ಬಳೆ ಹಾಕಿಕೊಂಡು, ಹೂ ಮುಡಿದು ಮೇಕಪ್ ಮಾಡಿಕೊಂಡು ಮದುವೆ ಮನೆ ತುಂಬಾ ಓಡಾಡಬೇಕು ಅಂತ ಅನ್ನಿಸುತ್ತಿದ್ದ ಅದಮ್ಯ ಬಯಕೆಯನ್ನು ಬಲವಂತವಾಗಿ ಅದುಮಿಟ್ಟುಕೊಂಡ. ದೊಡ್ಡಪ್ಪ ಕೊಡಿಸಿದ ಹೊಸ ಶರ್ಟು ಪ್ಯಾಂಟು ಹಾಕಿಕೊಂಡೇ ಮದುವೆ ಮನೆಯಲ್ಲಿ ಓಡಾಡಿದ. ಆದರೆ ಉತ್ಸಾಹವೇ ಇರಲಿಲ್ಲ. ವಾರಿಜ ಮಾತ್ರ ಮಗನ ನಿರುತ್ಸಾಹ ಗಮನಿಸಿ ಭೂಮಿಗಿಳಿದು ಹೋಗುತ್ತಿದ್ದಳು. ಪದೇ ಪದೇ ಅವನನ್ನು ಪರೀಕ್ಷಿಸುವಂತೆ ಅವನು ಇದ್ದಲ್ಲಿ ಬಂದು ಆಳವಾಗಿ ಗಮನಿಸುತ್ತಿದ್ದಳು. ಆ ವಯಸ್ಸಿನ ಮಕ್ಕಳಲ್ಲಿ ಇರಬಹುದಾದ ಯಾವ ಕ್ರಿಯೆಗಳು ಅವನಲ್ಲಿ ಕಾಣದೆ ನಿರಾಶೆಗೊಳ್ಳುತ್ತಿದ್ದಳು. ಇಡೀ ಮದುವೆ ಮನೆಯಲ್ಲಿ ನೆಂಟರಿಷ್ಟರ ಹೆಣ್ಣು ಮಕ್ಕಳು ಬೆಳದಿಂಗಳಂತೆ ಬಣ್ಣ ಬಣ್ಣವಾಗಿ ಕಣ್ಮುಂದೆ ಓಡಾಡುತ್ತಿದ್ದರೂ ಅವರಾರನ್ನು ಕಣ್ಣೆತ್ತಿಯೂ ನೋಡದ ಮಗನನ್ನೇ ವಿಷಾದವಾಗಿ ನೋಡುತ್ತಿದ್ದಳು. ಅಮ್ಮನ ಈ ಹದ್ದಿನ ದೃಷ್ಟಿಗೆ ಬೀಳದಂತಿರಲು ವೀರೂ ಸಾಕಷ್ಟು ಹೆಣಗಾಡುತ್ತಿದ್ದ. ಮದುವೆ ಸಂಭ್ರಮವೆಲ್ಲ ಮುಗಿದು ಅಕ್ಕ ಭಾವ ವಿದೇಶಕ್ಕೆ ಹೊರಟು ಹೋದರು. ಅಷ್ಟರಲ್ಲಿ ವೀರೂದೂ ರಿಸಲ್ಟ್ ಬಂದು ಒಳ್ಳೆ ಅಂಕ ತೆಗೆದು ಪಾಸಾಗಿದ್ದ. ಕಾಲೇಜಿಗೆ ಎಲ್ಲಿ ಸೇರಿಕೊಳ್ಳೋದು ಅಂತ ಒಂದಿಷ್ಟು ಚರ್ಚೆ ನಡೆಯಿತು. ಭಾಸ್ಕರನಿಗೆ ಈಗ ಜಿಲ್ಲಾ ಕೇಂದ್ರದಿಂದ ಸಣ್ಣ ಊರಿಗೆ ವರ್ಗವಾಗಿದ್ದು, ವರುಣನನ್ನು ಹಾಸ್ಟೆಲಿಗೆ ಸೇರಿಸುವವರಿದ್ದರು. ವೀರೂ ಕೂಡಾ ಹಾಸ್ಟೆಲ್ ಸೇರಬೇಕಾಗಿರುವುದರಿಂದ, ಹಾಸ್ಟಲ್ ಬದಲು ಇಲ್ಲೇ ಪಕ್ಕದ ಪಟ್ಟಣದಲ್ಲಿರುವ ಕಾಲೇಜಿಗೆ ಸೇರಿಕೊಳ್ಳುವುದು ಅಂತ ಆಯಿತು. ಪ್ರತಿದಿನ ಬಸ್ಸಿನಲ್ಲಿ ಕಾಲೇಜಿಗೆ ಹೋಗಿ ಬರುವುದು ಅಂತ ತೀರ್ಮಾನವಾಯಿತು.

ಹೊಸ ಕಾಲೇಜು, ಹೊಸ ಗೆಳೆಯರೊಂದಿಗೆ ನಿಧಾನವಾಗಿ ವೀರೂ ಹೊಂದಿಕೊಂಡ. ಹೈಸ್ಕೂಲಿನಂತಲ್ಲ ಕಾಲೇಜು ಅಂತ ಸ್ವಲ್ಪ ದಿನಗಳಲ್ಲೇ ವೀರೂವಿಗೆ ಅರ್ಥವಾಯಿತು. ಅಲ್ಲಿನ ಹುಡುಗರಿಗೆ ವೀರೂವಿನ ನಡೆ ನುಡಿ ಹಾಸ್ಯದ ವಸ್ತುವಾಗಿತ್ತು. ಅವನು ಹೆಣ್ಣಿನಂತೆ ನಡೆದುಕೊಳ್ಳುವುದು, ಅವನ ಹಾವಭಾವ ಎಲ್ಲವೂ ಗೆಳೆಯರ ಅಪಹಾಸ್ಯಕ್ಕೆ ತುತ್ತಾಗಿ ಕಾಲೇಜಿಗೆ ಹೋಗುವುದೆಂದರೆ ವೀರೂವಿಗೆ ಹಿಂಸೆ ಎನಿಸತೊಡಗಿತು. ಓದಲು ಇಷ್ಟವಿದ್ದರೂ ಸಹಪಾಠಿಗಳ ಕೀಟಲೆಯಿಂದಾಗಿ ಕಾಲೇಜು ಬೇಡವೆನಿಸಿ ಕೆಲದಿನ ಮನೆಯಲ್ಲಿಯೇ ಇರಲು ತೊಡಗಿದಾಗ ಜಗದೀಶರು ಆಕ್ಷೇಪಿಸಿ ಬಲವಂತವಾಗಿ ಕಾಲೇಜಿಗೆ ಕಳುಹಿಸಿದರು.

ಅದೊಂದು ದಿನ ಕಾಲೇಜಿನ ನಾಲ್ಕು ಗೆಳೆಯರು ಕಾಲೇಜಿಗೆ ಬಂಕ್ ಮಾಡಿ ರೆಸಾರ್ಟ್‌ಗೆ ಹೊರಟಿದ್ದವರು ವೀರೂವನ್ನೂ ಬಲವಂತವಾಗಿ ಕರೆದೊಯ್ದರು. ಅವರೆಲ್ಲ ಶ್ರೀಮಂತರ ಮನೆಯ ಮಕ್ಕಳಾಗಿದ್ದರು. ಕುಡಿದು ತಿಂದು ಮಜಾ ಮಾಡುವ ಪೋಲಿ ಪುಂಡು ಹುಡುಗರ ಗುಂಪು ಅದು. ವೀರೂ ಅವರ ಜೊತೆ ಸೇರಲಿಚ್ಛಿಸದೆ ಬರುವುದಿಲ್ಲವೆಂದರೂ ಒತ್ತಾಯಿಸಿ ಕರೆದುಕೊಂಡು ಹೋದರು. ಅಲ್ಲಿ ತಿಂದು ಕುಡಿದು ಮಜಾ ಮಾಡಿದರು, ಬೇಡವೆಂದರೂ ಕೇಳದೆ ವೀರುವಿಗೂ ಕಂಠ ಪೂರ್ತಿ ಕುಡಿಸಿದರು, ಮೊದಲ ಸಲ ಕುಡಿದಿದ್ದರಿಂದ ವೀರೂವಿಗೆ ಮೈಮೇಲೆ ಜ್ಞಾನವೇ ಇಲ್ಲದಂತಾಗಿ ಬಿದ್ದುಕೊಂಡ. ಯಾವಾಗ ನಿದ್ರೆ ಹತ್ತಿತೋ ತಿಳಿಯಲೇ ಇಲ್ಲ. ಎಚ್ಚರವಾದಾಗ ತನ್ನ ಮೈಮೇಲೆ ಬಟ್ಟೆಗಳು ಇಲ್ಲದಿರುವುದು ಅರಿವಿಗೆ ಬಂದು ತಕ್ಷಣಕೆ ನಾಚಿಕೆ ಆಗಿ ಬಟ್ಟೆ ಹಾಕಿಕೊಳ್ಳಲು ಏಳಲು ಹೋದರೆ ಏಳಲಾಗುತ್ತಲೇ ಇಲ್ಲ. ಮೈಯೆಲ್ಲ ನೋವಿನಿಂದ ಹಿಂಡುತ್ತಿದೆ. ತುಟಿ ಕೆನ್ನೆಗಳು ಉರಿಯುತ್ತಿವೆ. ಮೈಮೇಲೆ ಪ್ರಜ್ಞೆ ಇಲ್ಲದೆ ಬಿದ್ದುಕೊಂಡಿರುವ ಗೆಳೆಯರ ಮೈಮೇಲೆ ಕೂಡಾ ಬಟ್ಟೆ ಇಲ್ಲ. ಅಸಾಧ್ಯ ವೇದನೆ ನೀಡುತ್ತಿರುವ ತನ್ನ ದೇಹದಿಂದಾಗಿ ಏನಾಗಿ ಹೋಗಿದೆ ಅಂತ ಅರ್ಥವಾಯಿತು ವೀರೂವಿಗೆ. ಈ ಪುಂಡ ಗೆಳೆಯರು ತನ್ನನ್ನೇಕೆ ಬಲವಂತವಾಗಿ ಕರೆದುಕೊಂಡು ಬಂದರು ಅಂತ ನಿಧಾನವಾಗಿ ಅರಿವಿಗೆ ಬಂದು ನೋವಿನಿಂದ 'ಅಯ್ಯೊ ಪಾಪಿಗಳಾ, ನನ್ನ ಬದುಕನ್ನೇ ಹಾಳು ಮಾಡಿಬಿಟ್ಟರಲ್ಲ, ನಾನೇನು ನಿಮಗೆ ದ್ರೋಹ ಮಾಡಿದ್ದೆನೊ' ಅಂತ ಕೂಗಿದ. ಆದರೆ ಅದನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಆ ಹುಡುಗರು ಇರಲಿಲ್ಲ. ಮೆಲ್ಲನೆದ್ದು ಕಷ್ಟಪಟ್ಟು ಬಟ್ಟೆ ಹಾಕಿಕೊಂಡು ವಾಶ್ ರೂಮಿಗೆ ಬಂದರೆ ಅಲ್ಲಿ ಕೂರಲಾಗದೆ ಅಸಾಧ್ಯ ವೇದನೆಯಿಂದ ಮುಖ ಹಿಂಡಿದ. ಹಿಂಭಾಗದಲ್ಲಿ ಗಾಯವಾಗಿದ್ದು ಪ್ರಾಣ ಹೋಗುವ ಹಾಗಾಗಿ ಬಿಕ್ಕಳಿಸಿದ. ಕಷ್ಟಪಟ್ಟು ಮುಖ ತೊಳೆದುಕೊಂಡು ಬಂದು ಬಾಗಿಲು ತೆರೆದು ಹೊರ ಬಂದ. ಅದು ಹೇಗೆ ಮನೆಗೆ ಸೇರಿಕೊಂಡನೊ ಅವನಿಗೇ ತಿಳಿಯದು.

ಇಡೀ ರಾತ್ರಿ ಜ್ವರ. ಬೆಳಿಗ್ಗೆ ಆಸ್ಪತ್ರೆಗೆ ಕರೆದೊಯ್ಯಲು ಮನೆಯವರು ಪ್ರಯತ್ನಿಸಿದಾಗ ಬಿಲ್ ಕುಲ್ ವೀರೂ ಒಪ್ಪಲೇ ಇಲ್ಲ. ಕೊನೆಗೆ ಮಾದು ಪಟ್ಟಣಕ್ಕೆ ಹೋಗಿ ಮಾತ್ರೆ ತಂದುಕೊಟ್ಟ. ಎರಡು ದಿನಕ್ಕೆ ಜ್ವರ ಕಮ್ಮಿ ಆದರೂ ಮನಸ್ಸಿಗೆ ಬಡಿದ ರಾವಿನಿಂದ ಚೇತರಿಸಿಕೊಳ್ಳಲಾರದೆ ಹೋಗಿದ್ದ. ಮಲಗಲು ಕಷ್ಟವಾಗುತ್ತಿತ್ತು. ದಿನನಿತ್ಯದ ಕ್ರಿಯೆಗಳಿಗಾಗಿ ಬಚ್ಚಲ ಮನೆಗೆ ಹೋಗಲೇ ಹೆದರುವಂತಾಗಿತ್ತು. ನಿಲ್ಲಲಾರದೆ ಕೂರಲಾಗದೆ, ಮಲಗಲಾರದೆ ಗಾಯ ಮಾಯುವ ತನಕ ನರಕ ಅನುಭವಿಸಿಬಿಟ್ಟ. ಆ ಘಟನೆ ನಡೆದ ಮೇಲೆ ಕಾಲೇಜಿಗೆ ಹೋಗಲಾರೆ ಅಂತ ಪಟ್ಟು ಹಿಡಿದು ಕುಳಿತುಬಿಟ್ಟ. ತನ್ನ ಮೇಲಾದ ಅತ್ಯಾಚಾರವನ್ನು ಯಾರೊಂದಿಗೂ ಹೇಳಲಾಗದೆ ಒಳಗೊಳಗೆ ಕುಸಿಯುತ್ತಿದ್ದ. ಇತ್ತ ಮನಸ್ಸಿನ ಆಸೆಯಂತೆ ಹೆಣ್ಣಿನಂತೆ ಇರಲಾಗುತ್ತಿಲ್ಲ, ಅತ್ತ ಗಂಡಿನಂತೆಯೂ ಇರಲಾಗುತ್ತಿಲ್ಲ. ಯಾಕಪ್ಪ ದೇವರೇ ಇಂತಹ ಶಾಪ ಕೊಟ್ಟು ಬಿಟ್ಟೆ, ಅಂಗವಿಕಲನಾಗಿದ್ದರೂ ಪರವಾಗಿರಲಿಲ್ಲ, ಆದರೆ ಈ ಹೆಣ್ಣೂ ಅಲ್ಲದ ಗಂಡೂ ಅಲ್ಲದ ಈ ಸ್ಥಿತಿಯಲ್ಲಿ ಏಕೆ ಹುಟ್ಟಿಸಿಬಿಟ್ಟೆ, ನನ್ನ ಈ ಪರಿಸ್ಥಿತಿ ಮನೆಯವರಿಗೆ ಅರ್ಥವಾಗುವುದಿಲ್ಲ, ನನ್ನಿಷ್ಟದಂತೆ ಇರಲೂ ಬಿಡುವುದಿಲ್ಲ, ಓದುವಂತಿಲ್ಲ, ಕೆಲಸ ಮಾಡುವಂತಿಲ್ಲ, ಎಲ್ಲರ ಹೀಯಾಳಿಕೆ, ಅವಮಾನ. ನೋವು, ಹಿಂಸೆ ಅನುಭವಿಸಿ ಬಾಳುವುದಕ್ಕಿಂತ ಸಾಯುವುದೇ ಮೇಲಲ್ಲವೇ, ಮೊಟ್ಟ ಮೊದಲ ಬಾರಿಗೆ ಬದುಕುವುದು ಬೇಡವೆನಿಸಿತ್ತು. ಅಮ್ಮನ ಮುಖ ಮುಂದೆ ಬಂದು ಸಾಯುವ ಮನಸ್ಥಿತಿಯನ್ನು ಬಲವಂತವಾಗಿ ದೂರ ಮಾಡುವ ಪ್ರಯತ್ನ ನಡೆಸಿದ.

ದಿನಗಳು ಉರುಳಿದವು. ದಿನೇ ದಿನೇ ವೀರೂ ಮಂಕಾಗುತ್ತಾ ಹೋದ. ಇದು ಮನೆಯವರ ಗಮನಕ್ಕೆ ಬಂದು ಚಿಂತಿತರಾದರು. ಒಂದು ಕಡೆ ವಾರಿಜ ಸೊರಗುತ್ತಿದ್ದರೆ, ಮತ್ತೊಂದು ಕಡೆ ವೀರು, ಏನಾಗಿದೆ ಇವರಿಬ್ಬರಿಗೆ ಅಂತ ಜಗದೀಶರು ಚಿಂತಿತರಾದರು, ಶಾಂಭವಿ ಕೂಡಾ ಈ ಬಗ್ಗೆ ಪದೇ ಪದೇ ಹೇಳುತ್ತಿದ್ದಳು. ವೀರು ಮಾಮೂಲಿ ಹುಡುಗನಂತೆ ಇಲ್ಲ, ಅವನು ಹೆಣ್ಣು ಮಕ್ಕಳಂತೆ ಆಡುತ್ತಾನೆ, ಈಗಲೂ ಅವನು ಹೆಣ್ಣಿನಂತೆ ಅಲಂಕರಿಸಿಕೊಳ್ಳಬೇಕು ಅನ್ನೋ ಆಸೆ ಇಟ್ಟುಕೊಂಡಿದ್ದಾನೆ. ಅವನ ರೂಮಿನಲ್ಲಿ ಹುಡುಗಿಯರ ಬಟ್ಟೆ ಇದೆ, ಪೌಡರು, ಲಿಪ್‌ಸ್ಟಿಕ್, ಬಳೆ, ಸರ ಎಲ್ಲವನ್ನೂ ಇಟ್ಟುಕೊಂಡಿದ್ದಾನೆ. ರಾತ್ರಿ ಎಲ್ಲರೂ ಮಲಗಿದ ಮೇಲೆ ಹುಡುಗಿಯಂತೆ ಡ್ರೆಸ್ ಮಾಡಿಕೊಂಡು ಮನೆಯಲ್ಲೆಲ್ಲಾ ಅಡ್ಡಾಡುತ್ತಿರುತ್ತಾನೆ, ನಮಗೆ